

# ಸೌಂದರ್ಯವರ್ಧನೆಗೆ ತೈಲ

**ಸೌಂದರ್ಯವರ್ಧಕ ತೈಲಗಳು ತ್ವಚೆಯ ಅಂದ ಹೆಚ್ಚಿಸಲು ಸಹಕಾರಿ. ವಿವಿಧ ರೀತಿಯ ತೈಲಗಳನ್ನು ಬಳಸಿ ಸೌಂದರ್ಯಚಿಕಿತ್ಸೆ ಮಾಡಿದರೆ ಮೊಡವೆ, ಕಪ್ಪುಕಲೆಗಳನ್ನು ಹೋಗಲಾಡಿಸಿ ಆರೋಗ್ಯಪೂರ್ಣ ತ್ವಚೆಯನ್ನು ಪಡೆಯಬಹುದು.**

■ **ಪವಿತ್ರಾ ರಾಘವೇಂದ್ರ ಶೆಟ್ಟಿ**

ಮುಖದ ಅಂದ ಹೆಚ್ಚಿಸಿಕೊಳ್ಳುವುದಕ್ಕೆ ಏನೆಲ್ಲಾ ಕಸರತ್ತು ಮಾಡುತ್ತೇವೆ. ಕ್ರೀಂ, ಮಾಯಿಶ್ಚರೈಸರ್. ಸೀರಮ್‌ನಿಂದ ಹಿಡಿದು ಪ್ರತಿಯೊಂದನ್ನೂ ಪ್ರಯೋಗ ಮಾಡುತ್ತೇವೆ. ಇದರ ಜತೆಗ ಮನೆಮದ್ದುಗಳಿಗೇನೂ ಕಡಿಮೆ ಇಲ್ಲ. ಮುಖದಲ್ಲಿ ಒಂದು ಮೊಡವೆ ಎದ್ದರೆ ಅದು ಉಂಟು ಮಾಡುವ ಸಮಸ್ಯೆ ಒಂದೆರಡಲ್ಲ. 'ಮಳೆ ನಿಂತರೂ ಮರದ ಹನಿ ನಿಲ್ಲಲ್ಲ' ಎನ್ನುವ ಹಾಗೆ ಮೊಡವೆ ಮೂಡಿ ಮರೆಯಾದರೂ ಅದು ಉಂಟು ಮಾಡಿದ ಕಲೆ ಹೋಗಲ್ಲ. ಹಾಗೇ ಒಬ್ಬೊಬ್ಬರ ಚರ್ಮ ಒಂದೊಂದು ರೀತಿ ಇರುತ್ತದೆ. ಒಬ್ಬರಿಗೆ ಕಡಲೆಹಿಟ್ಟಿನಿಂದ ಮುಖ ತೊಳೆದರೆ ಕಲೆ, ಚುಕ್ಕಿ ಹೋಯಿತೆಂದರೆ ಎಲ್ಲರಿಗೂ ಇದು ಪರಿಣಾಮ ಬೀರಲ್ಲ. ಇನ್ನೊಬ್ಬರಿಗೆ ಕಡಲೆಹಿಟ್ಟಿನಿಂದ ಅಲರ್ಜಿ ಉಂಟಾಗುತ್ತದೆ. ಸೌಂದರ್ಯವರ್ಧಕದ ಸಾಲಿನಲ್ಲಿ ಮುಂಚೂಣಿಯಲ್ಲಿ ನಿಲ್ಲುವುದು ಎಸೆನ್ಶಿಯಲ್ ಆಯಿಲ್ ಅಥವಾ ಸೌಂದರ್ಯವರ್ಧಕ ತೈಲ. ಇದರಲ್ಲಿ ರೋಗ ನಿರೋಧಕ ಶಕ್ತಿಯೂ ಇದೆ.

ಸುಗಂಧದ್ರವ್ಯ ಇಷ್ಟಪಡುವವರಿಗೆ ಘಂ ಎನ್ನುವ ಇದರ ವಾಸನೆಯೇ ಒಂದು ರೀತಿಯ ರಿಲ್ಯಾಕ್ಸ್ ಅನಿಸುತ್ತದೆ. ಈ ಎಸೆನ್ಶಿಯಲ್ ಆಯಿಲ್ ಸ್ವಲ್ಪ ದುಬಾರಿ ಅನಿಸಿದರೂ ಇದರ ಪ್ರಯೋಜನ ಸಾಕಷ್ಟು ಇದೆ. ಅರೋಮ ಥೆರಪಿಗೆ ಬಳಸುವ ಇದನ್ನು ಸೌಂದರ್ಯವರ್ಧಕವಾಗಿಯೂ ಬಳಸಬಹುದು. ಮಸಾಜ್‌ಗೆ ಹೇಳಿ ಮಾಡಿಸಿದ ಆಯಿಲ್ ಇದು.

ಈ ಸುಗಂಧಯುಕ್ತ ತೈಲಗಳನ್ನು ಹಿಂದಿನ ಕಾಲದಿಂದಲೂ ಬಳಸುತ್ತಿದ್ದರು. ಆಹಾರ, ಔಷಧಿ, ದುರ್ವಾಸನೆ ನಿವಾರಣೆಯಲ್ಲಿ ಇದನ್ನು ಉಪಯೋಗಿಸಲಾಗುತ್ತಿತ್ತು. ಭಾರತ, ಚೀನಾ, ರೋಮ್, ಈಜಿಪ್ಟ್, ಗ್ರೀಕ್ ದೇಶಗಳಲ್ಲಿ ಇದು ತ್ವಚೆಯ ಆರೈಕೆ, ಸೌಂದರ್ಯವರ್ಧಕ, ಮಸಾಜ್ ಹಾಗೂ ಔಷಧಿಗಳಿಗೆ ಇದನ್ನು ಬಳಕೆ ಮಾಡಲಾಗುತ್ತಿತ್ತು.

